# ಗ್ರಾಮ ಸ್ವರಾಜ್ಯಕ್ಕೊಂದು ಹೆದ್ದಾರಿ

## ಪಂಚಾಯತ್ ರಾಜ್ ತಿದ್ದುಪಡಿ ಸಮಿತಿಯ ವರದಿ-2014ರ ಕೆಲವು ಮುಖ್ಯಾಂಶಗಳು

**ಅಭಿವೃದ್ಧಿಯ ಕಾರ್ಯಕ್ರಮಗಳಲ್ಲ, ಅಭಿವೃದ್ಧಿಯೇ ಜವಾಬ್ದಾರಿ.**

ಗ್ರಾಮ ಸ್ವರಾಜ್ಯ ಈ ದೇಶದ ಜನರ ಕನಸು. ಅವರು ತನ್ನ ಹಳ್ಳಿ ತನ್ನೂರು ತನ್ನ ಜನರ ಬಗ್ಗೆ ತಾವೇ ನಿರ್ಧರಿಸುವಂತಾಗಲು ಯಾವ ಹಂತದಲ್ಲಿ ಏನು ಕೆಲಸ ಆಗಬೇಕು ಅಲ್ಲಿನ ಯೋಜನೆ ಅಲ್ಲೇ ನಿರ್ಧಾರ ಅನುಷ್ಠಾನ ಎನ್ನುವ ನೆಲೆಯಲ್ಲಿ ಈ ವರದಿಯ ಅಂಶಗಳು ಬಂದಿವೆ. ಮುಖ್ಯವಾಗಿ ಜನರ ಮೂಲಭೂತ ಅವಶ್ಯಕತೆ ಸೌಕರ್ಯಗಳ ಬಗ್ಗೆ ಅವರೇ ನಿರ್ಧರಿಸುವಂತಾಗಲು ಮುಖ್ಯವಾಗಿ 29 ಅಭಿವೃದ್ಧಿಯ ವಿಷಯಗಳ ಬಗ್ಗೆ ಬೇರೆ ಬೇರೆ ಹಂತದ ಪಂಚಾಯತ್‌ಗಳಲ್ಲಿ ಎಲ್ಲೆಲ್ಲಿ ಏನೇನು ಚಟುವಟಿಕೆಗಳು ಆಗಬೇಕೆಂದು ಗುರುತಿಸಲಾಯಿತು. ಮೂರು ಹಂತದ ಪಂಚಾಯತ್‌ಗಳು ರಾಜ್ಯ ಕೇಂದ್ರ ಸರಕಾರಗಳ ಕಾರ್ಯಕ್ರಮಗಳ ವಿತರಣಾ ಏಜೆಂಟ್ ಗಳಾಗದೆ ತಮ್ಮ ಜನರಿಗೆ ಅಗತ್ಯವಿರುವ ವಿಷಯದ ಬಗ್ಗೆ ಜನರೊಡನೆ ಚರ್ಚಿಸಿ ಯೋಜಿಸಿ ಅನುಷ್ಠಾನಗೊಳಸುವ ಅಗತ್ಯಕ್ಕೆ ಇಲ್ಲಿ ಒತ್ತು ಕೊಡಲಾಗಿದೆ. ಹೀಗೆ ಮಾಡುವಾಗ ಅದು ಬರೀ ಅಭಿವೃದ್ಧಿಯ ಕಾರ್ಯಕ್ರಮದ ಚಟುವಟಿಕೆಯಾಗದೇ ಅಭಿವೃದ್ಧಿ ಎನ್ನು ಒಂದು ಜವಾಬ್ದಾರಿ ಎನ್ನುವ ನೆಲೆಯಲ್ಲಿ ಪ್ರತೀ ಹಂತದ ಸರಕಾರಕ್ಕೆ ಸ್ಪಷ್ಟ ಜವಾಬ್ದಾರಿಯನ್ನು ನಿರ್ಧರಿಸಲಾಗಿದೆ. ಅದರ ಒಡನೆ ಅಗತ್ಯ ಇರುವ ಸಂಪನ್ಮೂಲ ಮತ್ತು ಮಾನವ ಸೇವೆಯನ್ನು ಹಸ್ತಾಂತರಿಸಲು ಶಿಪಾರಸ್ಸು ಮಾಡಲಾಗಿದೆ. ಈ ಮೂಲಕ ಯಾವ ಅಭಿವೃದ್ಧಿ ಕಾರ್ಯಕ್ರಮಕ್ಕೆ ಯಾರು ಜವಾಬ್ದಾರರು, ಅದನ್ನು ಹೇಗೆ ನಿರ್ವಹಿಸಬೇಕು ಮತ್ತು ಗ್ರಾಮಸಭೆಗೆ ಅದರಲ್ಲಿ ಪಾತ್ರವನ್ನು ವಿಶೇಷವಾಗಿ ಗುರುತಿಸಲ್ಪಟ್ಟಿದೆ.

**ವೈಜ್ಞಾನಿಕ ಮತ್ತು ವಾಸ್ತವದ ನೆಲೆಯಲ್ಲಿ ಯೋಜನೆಯ ಅನುಷ್ಠಾನ:**

ಸಾಮಾಜಿಕ ನ್ಯಾಯ ಪರಿಶಿಷ್ಠ ಜಾತಿ ಪರಿಶಿಷ್ಠ ಪಂಗಡ, ಮಹಿಳೆ ಮತ್ತು ಮಕ್ಕಳು ಭಾಗವಹಿಸುವ ವೇದಿಕೆ ಮತ್ತು ವಾತಾವರಣ ಸೃಷ್ಟಿಸುನ ಜೊತೆ ಜೊತೆಗೇನೆ ಪಂಚಾಯತ್ ಮಟ್ಟದಲ್ಲಿ ಎಲ್ಲಾ ಮಾಹಿತಿ ಅಂಕಿ ಅಂಶ ನಿರ್ವಹಣೆ ಹಾಗೂ ಅನುಭವಿಗಳು ತಜ್ಞರು ಮತ್ತು ಎಲ್ಲಾ ವರ್ಗದ ಜನರು ಬಾಗವಹಿಸುವಿಕೆಯ ಮೂಲಕ ವೈಜ್ಞಾನಿಕ ತಳಹದಿಯ ಮೇಲೆ ಯೋಜನೆಗಳ ತಯಾರಿಕೆಗೆ ಒತ್ತು ನೀಡಿದೆ. ಚುನಾವಣೆಯ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಹೆಚ್ಚು ಪಾರದರ್ಶಕವಾಗಿ ನಡೆಯುವಂತಾಗಲು ಶಿಫಾರಸ್ಸು ಈ ವರದಿಯಲ್ಲಿದೆ.

**ಗ್ರಾಮ ಮಟ್ಟದಲ್ಲೇ ಯೋಜನೆ ಅನುಷ್ಠಾನ ನಿರ್ವಹಣೆಗೆ ಆದ್ಯತೆ:**

ಅಭಿವೃದ್ಧಿ ಕಾರ್ಯಕ್ರಮ ಇಲಾಖಾವಾರು ನೋಡದೆ ಎಲ್ಲಿ ಯಾವ ಕೆಲಸ ಆಗಬೇಕು ಅಲ್ಲೇ ಅನುಷ್ಠಾನ, ನಿರ್ವಹಣೆಯ ಜವಾಬ್ದಾರಿಯನ್ನು ಮಾಡುತ್ತಾ, ಅಲ್ಲಿಗೇನೆ ಸಂಪನ್ಮೂಲದ ಹರಿವನ್ನು ಮಾಡುವ ಮೂಲಕ ಅಭಿವೃದ್ಧಿ ಕಾರ್ಯಕ್ಕೆ ನಿರ್ದಿಷ್ಠ ಸ್ಪಷ್ಟ ಜವಾಬ್ದಾರಿಯಲ್ಲದೆ ಅಭಿವೃದ್ಧಿ ಕಾರ್ಯಕ್ಕೆ ವೇಗ ನೀಡಲು ಶಿಫಾರಸ್ಸು ಮಾಡಿದೆ.

**ಮೂರು ಹಂತದ ಪಂಚಾಯತ್‌ಗಳು ಗ್ರಾಮ ಸಭೆಗೇನೆ ಬದ್ಧ ಮತ್ತು ಉತ್ತರದಾಯಿಗಳು:**

ಗ್ರಾಮಸಭೆಯಲ್ಲಿ ಜನ ಹೆಚ್ಚು ಭಾಗವಹಿಸುವಂತಾಗಲು ಮತ್ತು ಪರಿಣಾಮಕಾರಿ ವೇದಿಕೆಯನ್ನಾಗಿ ಮಾಡಲು ಪ್ರಪ್ರಥಮ ಬಾರಿಗೆ ಜವಾಬ್ದಾರಿ ನಕ್ಷೆಯಲ್ಲಿ ಗ್ರಾಮ ಸಭೆಯ ಜವಾಬ್ದಾರಿಯನ್ನು ವಿವರಿಸಲಾಗಿದೆ. ಅಭಿವೃದ್ಧಿ ಯೊಜನೆಗೆ ಗ್ರಾಮ ಸಭೆ ತಳಹದಿಯಾಗಿ ತಳಮಟ್ಟದಿಂದ ಯೋಜನೆ ಪ್ರಕ್ರಿಯೆಗೆ ಆದ್ಯತೆ ನೀಡಲಾಗಿದೆ. ಎಲ್ಲಾ ತಳಮಟ್ಟದ ಯೋಜನೆಗಳ ಆಲೋಚನೆಗಳು ತಾಲೂಕು ಮಟ್ಟದ ಯೋಜನೆ ತಯಾರಿಕೆಗೆ ನೆಲೆಯಾಗಿರತಕ್ಕದ್ದು. ಎಲ್ಲಾ ತಾಲ್ಲೂಕು ಮಟ್ಟದ ಯೋಜನೆಗಳು ಜಿಲ್ಲಾ ಯೋಜನೆಗೆ ತಾಲ್ಲೂಕು ಮಟ್ಟದಲ್ಲಿ ಆಧಾರವಾಗಿರುತ್ತದೆ ಮತ್ತು ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ ರಚಿಸಿ ಆ ಸಮಿತಿಯಲ್ಲಿ ತಾಲೂಕು ಪಂಚಾಯತ್ ಪ್ರತಿನಿಧಿಯಲ್ಲದೆ ಗ್ರಾಮ ಪಂಚಾಯತ್ ಹಾಗೂ ಪುರಸಭೆ, ನಗರ ಸಭೆಯ ಪ್ರತಿನಿಧಿಗಳೂ ಭಾಗವಹಿಸುತ್ತಾರೆ. ಹಾಗೆಯೇ ಜಿಲ್ಲಾ ಯೋಜನಾ ಸಮಿತಿಯಲ್ಲಿ ಗ್ರಾಮ ತಾಲೂಕು ಮಟ್ಟದಿಂದಲೂ ಪ್ರತಿನಿಧಿಗಳ ಭಾಗವಹಿಸುವಿಕೆಗೆ ಅವಕಾಶ ಮಾಡಿ ಕೊಡುವುದರ ಮೂಲಕ ಜಿಲ್ಲೆಯ ಸಮಗ್ರ ಯೋಜನೆಗೆ ಗ್ರಾಮ ಸಭೆಯ ಯೋಜನೆಯೇ ತಳಹದಿಯಾಗಿ ರೂಪಿಸಲಾಗಿದೆ. ಈ ಮೂಲಕ ಯೋಜನೆಗಳು ಬಿಡಿ ಬಿಡಿಯಾಗದೇ ವಿವಿಧ ವಿಭಾಗ ಆಗದೆ ಜನರ ನಿಜ ಅಗತ್ಯತೆ

ಮೇಲೆ ಸಮಗ್ರವಾಗಿ ರೂಪಿತಗೊಳ್ಳುವುದಲ್ಲದೆ ಮೂರು ಹಂತದ ಪಂಚಾಯತ್‌ಗಳ ನಡುವೆ ಸಹಜ ಸಂಬಂಧ ಪರಸ್ಪರ ವಿಷಯಗಳ ಅರಿವಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಅಲ್ಲದೆ ತಾಲೂಕು ಮಟ್ಟದ ಯೋಜನೆಯಲ್ಲಿ ತಾಲೂಕು ಪಂಚಾಯತನ್ನು ಮುಖ್ಯ ಪಾಲುದಾರನನ್ನಾಗಿ ಮಾಡಿದೆ. ಮೂರು ಹಂತದ ಪಂಚಾಯತ್‌ನ ಅಧ್ಯಕ್ಷರು ಆಯಾ ಹಂತದ ಪಂಚಾಯತ್‌ನ ಕಾರ್ಯಕಾರಿ ಮುಖ್ಯಸ್ಥರ ನೆಲೆಯಲ್ಲಿ ಜವಾಬ್ದಾರಿಯಾಗಿರತ್ತಾರೆ. ಪಿ ಡಿ ಒ, ಇ ಒ, ಸಿ ಇ ಒ ಇವರನ್ನು ಆಯಾ ಹಂತದ ಪಂಚಾಯತ್‌ಗಳಿಗೆ ಉತ್ತರದಾಯಿಗಳನ್ನಾಗಿ ಮಾಡಿ ಅವರು ಅಯಾ ಹಂತದ ಪಂಚಾಯತ್ ಗಳ ಮುಖ್ಯ ಕಾರ್ಯದರ್ಶಿಗಳನ್ನಾಗಿ ಹೆಸರಿಸಲು ಶಿಫಾರಸ್ಸು ಮಾಡಲಾಗಿದೆ. ಜಿಲ್ಲೆಯ ಸಚಿವರು, ಸಂಸದರು ಮತ್ತು ಶಾಸಕರಿಗೂ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಯೋಜನೆ ರೂಪಿಸುವಲ್ಲಿ ಜವಾಬ್ದಾರಿ ನೀಡಲಾಗಿದೆ,

**ಹಣಕಾಸು:**

ರಾಜ್ಯ ಬಜೆಟ್ಟಿನ ಕನಿಷ್ಠ ಶೇಕಡಾ ೩೦ರಷ್ಟು ಯೋಜನಾ ಸಂಪನ್ಮೂಲ ಮೂರು ಹಂತಗಳ ಪಂಚಾಯತ್‌ಗಳಿಗೆ ಹಂಚಿಕೆಯಾಗಬೇಕು. ಅದರಲ್ಲಿ ಶೇಕಡಾ 50 ಹಣಕಾಸು ಮುಕ್ತ ನಿಧಿಯಾಗಿ ಸಿಗಬೇಕು. ಸಂಪನ್ಮೂಲ ಹಂಚಿಕೆಯಲ್ಲಿ ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ ಸಮಾನ ಮೊತ್ತ ಹಂಚಿಕೆ ನ್ಯಾಯಯುತವಲ್ಲ ಎಂದು ಅರಿತು ಸಂಪನ್ಮೂಲ ಹಂಚಿಕೆ ಒಂದೇ ತೆರನಾಗಿ ಇರದೆ ಅಲ್ಲಿನ ಅಗತ್ಯತೆ ಯೋಜನೆ ಆದ್ಯತೆಗಳು ಮತ್ತು ಅಲ್ಲಿನ ವಾತಾವರಣದ ನೆಲೆಯಲ್ಲಿ ಒಂದು "ಪ್ರಯಾರಿಟಿ ರ‍್ಯಾಂಕಿಂಗ್ ಮ್ಯಾಟ್ರಿಕ್" ಅಭಿವೃದ್ಧಿ ಪಡಿಸಿ ಅದರ ಆಧಾರದ ಮೇಲೆ ಪಂಚಾಯತ್‌ಗಳಿಗೆ ಹಣಕಾಸು ಹಂಚಿಕೆಯಾಗಬೇಕು. ಗ್ರಾಮ ಪಂಚಾಯತ್‌ಗಳು ಸ್ಥಳೀಯ ಸಂಪನ್ಮೂಲ ಕ್ರೋಡೀಕರಣಕ್ಕೆ ಹಲವಾರು ದಾರಿಗಳನ್ನು ಕಂಡು ಕೊಂಡುವುದಲ್ಲದೆ ಪಂಚಾಯತ್ ಅನುದಾನಗಳು ನೇರವಾಗಿ ಅಯಾ ಪಂಚಾಯತ್ ನಿಧಿಗೆ ವರ್ಗಾವಣೆ ಮಾಡಲು ಶಿಫಾರಸ್ಸು ಮಾಡಿದೆ. ಬಡ್ಜೆಟ್ ಶೀರ್ಷಿಕೆ ನೆಲೆಯಲ್ಲೇ ಹಣಕಾಸು ವಿನಿಯೋಗಿಸುವಾಗ ಆ ಶೀರ್ಷಿಕೆ ಒಳಗಡೆಯೇ ಹೊಂದಾಣಿಕೆ ಮಾಡಲು ಅವಕಾಶ ನೀಡಲಾಗಿದೆ, ಅಂದರೆ ಒಂದು ಕೋಸ್ಟ್ ಹೆಡ್ ನಲ್ಲಿ ವಿನಿಯೋಗಿಸಲು ಅಗತ್ತ್ಯತೆ ಇಲ್ಲದಾಗ ಅದೇ ಶೀರ್ಷಿಕೆಯ ಇನ್ನೊಂದು ಕೋಸ್ಟ್ ಹೆಡ್ ನಲ್ಲಿ ವಿನಿಯೋಗಿಸಲು ಅವಕಾಶ ಮಾಡಿ ಕೊಡಲಾಗಿದೆ, ಈ ಮೂಲಕ ಸ್ಥಳೀಯ ಅಗತ್ಯತೆ ಮೇಲೆ ಹಣಕಾಸು ವಿನಿಯೋಗ ಪುನರ್ ರೂಪಿಸಲು ಅವಕಾಶ ಪಂಚಾಯತ್‌ಗಿದೆ. ಈ ಬಡ್ಜೆಟ್ ಶೀರ್ಷಿಕೆಯ ಹಣ ವಿನಿಯೋಗಿಸಲು ಶಿಫಾರಸ್ಸು ಮಾಡಲಾಗಿದೆ.

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಆ ಗುಂಪಿನ ವಿಶೇಷ ಗ್ರಾಮಸಭೆ:**

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗಾಗಿಯೇ ಅವರದ್ದೇ ವಿಶೇಷ ಗ್ರಾಮ ಸಭೆ ನಡೆಸಿ ಅವರಿಗಾಗಿಯೇ ಬಂದ ಅನುದಾನ ಕಾರ್ಯಕ್ರಮದ ಬಗ್ಗೆ ಯೋಜನೆ ಮಾಡುವುದು. ಈ ಮೂಲಕ ಅವರ ಅವಶ್ಯಕತೆಗಳಿಗೆ ಅವರದ್ದೇ ನಿರ್ಣಯ ಅಲ್ಲದೆ ಪರಿಶಿಷ್ಟ ಜಾತಿ ಪಂಗಡದ ಅನುದಾನದ ದುರ್ಬಳಕೆಗೆ ಇದು ಕಡಿವಾಣ ಹಾಕುತ್ತದೆ.

ಅದರಂತೆಯೇ ಮಹಿಳಾ ಮತ್ತು ಮಕ್ಕಳ ವಿಶೇಷ ಗ್ರಾಮ ಸಭೆಗೆ ಅವಕಾಶ ಮಾಡಿದ್ದು ಮಹಿಳಾ ಮತ್ತು ಮಕ್ಕಳ ಯೋಜನೆ ಬಗ್ಗೆ ಅವರ ನಿರ್ಧಾರವೇ ಆಧಾರವಾಗುತ್ತದೆ.

**ಕೇವಲ ಬಹುಮತವೇ ನಿರ್ಣಯವಲ್ಲ ಸಾಮಾಜಿಕ ನ್ಯಾಯಕ್ಕೆ ಆದ್ಯತೆ.**

ಬದಿಗೊತ್ತಲ್ಪಟ್ಟ ವರ್ಗ ಮಹಿಳೆ ಮಕ್ಕಳು ಇತರ ಅಲ್ಪ ಸಂಖ್ಯಾತ, ಹಿಂದುಳಿದ ವರ್ಗಗಳ ವಿಷಯಗಳಿಗೆ ಆದ್ಯತೆ ನೀಡಲು ಮತ್ತು ಆದ್ಯತೆಯ ಪಟ್ಟಿ ಮಾಡಲು ವಿಧಿ ವಿಧಾನಗಳನ್ನು ರೂಪಿಸಲಾಗಿದೆ. ಈ ಮೂಲಕ ಒಂದು ವಿಷಯದ ಬಗ್ಗೆ ತೀರ್ಮಾನಿಸಲು ಬರೀ ಬಹುಮತಕ್ಕೆ ಆದ್ಯತೆ ನೀಡದೆ ಅದರ ಅಗತ್ಯತೆ, ಅದರ ಪರಿಣಾಮದ ವಿಸ್ತಾರ ಹಿಂದುಳಿಯುವಿಕೆ ತುರ್ತು ಅಗತ್ಯ ಅನುಷ್ಠಾನದ ಸಾಧ್ಯತೆ ಈ ನೆಲೆಯಲ್ಲಿ ನಿರ್ಣಯಿಸಿ ಯೋಜನೆಯಲ್ಲಿ ಆದ್ಯತೆಯ ಪಟ್ಟಿ ಮಾಡಲು ಸಲಹೆ ನೀಡಲಾಗಿದೆ. ಈ ಮೂಲಕ ಹಿಂದುಳಿದ ವರ್ಗ ಮುಖ್ಯವಾಗಿ ಪರಿಶಿಷ್ಟ ಜಾತಿ/ಪಂಗಡ, ಮಹಿಳೆಯರು ಮಕ್ಕಳು ಹೀಗೆ ದುರ್ಬಲ ವರ್ಗದವರ ವಿಷಯಕ್ಕೆ ಆದ್ಯತೆಗಳ ಅವಕಾಶ ಹೆಚ್ಚಾಗಲಿದೆ ಮತ್ತು ಈ ನೆಲೆಯಲ್ಲೇ ಫಲಾನುಭವಿಗಳ ಆಯ್ಕೆ ಕಾರ್ಯಕ್ರಮಗಳ ಆದ್ಯತೆ ಅಭಿವೃದ್ಧಿ ಯೋಜನೆ ತಯಾರಿಸಲು ಸಾಧ್ಯವಾಗುತ್ತದೆ.

**ಜನರದ್ದೇ ನಿರ್ಧಾರ ಜನರದ್ದೇ ಅಧಿಕಾರ:**

ಪ್ರಜಾಪ್ರಭುತ್ವ ಮೂಲ ಸೆಲೆಯಾದ ಜನರ ಭಾಗವಹಿಸುವಿಕೆಗೆ ವೇದಿಕೆಯಾದ ಗ್ರಾಮ ಸಭೆ ಸದೃಢಗೊಳಿಸಲು ಹಲವಾರು ವಿಷಯಗಳನ್ನು ಇಲ್ಲಿ ಗುರುತಿಸಲಾಗಿದೆ. ಎಲ್ಲಾ ಕಾರ್ಯಕ್ರಮಗಳ ಫಲಾನುಭವಿಗಳ ಆಯ್ಕೆ ಮತ್ತು ಎಲ್ಲಾ ಯೋಜನೆಗಳ ಅಂಗೀಕಾರ ಗ್ರಾಮ ಸಭೆಯದ್ದೇ. ಜನರ ಜವಾಬ್ದಾರಿ ನಕ್ಷೆಯಲ್ಲಿ ಗ್ರಾಮ ಸಭೆಯ ಜವಾಬ್ದಾರಿ ಬಗ್ಗೆ ಸ್ಪಷ್ಟ ನೀತಿ ನಿಯಮ ನಡಾವಳಿಗಳನ್ನು ರೂಪಿಸಲಾಗಿದೆ. ಗ್ರಾಮ ಪಂಚಾಯತ್ ಮಟ್ಟದ ಯಾವುದೇ ಕಾಮಗಾರಿ ಯೋಜನೆ ಕಾರ್ಯಕ್ರಮದ ಬಗ್ಗೆ ಮೌಲ್ಯ ಮಾಪನ ಗುಣ ಮಟ್ಟ ಪರಿಶೀಲನೆಗೆ ಗ್ರಾಮ ಸಭೆಗೆ ಅಧಿಕಾರ ನೀಡಲಾಗಿದೆ.

**ಪೂರ್ಣಕಾಲೀನ ಕಾರ್ಯಕಾರಿ ಮುಖ್ಯಸ್ಥರಾಗಿ ಪಂಚಾಯತ್ ಅಧ್ಯಕ್ಷರು:**

ಮೂರು ಹಂತದ ಅಧ್ಯಕ್ಷರು ಕಾರ್ಯಕಾರಿ ಮುಖ್ಯಸ್ಥರಾಗಿರುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಅಧ್ಯಕ್ಷರಿಗೆ ವಿಶೇಷ ಅಧಿಕಾರ ನೀಡಲಾಗಿದೆ. ತುರ್ತು ಕಾರಣ, ಅವಘಡ, ಆಕಸ್ಮಿಕ ಸಂದರ್ಭ ನೈಸರ್ಗಿಕ ವಿಕೋಪ ಮುಂತಾದ ಸಂದರ್ಭದಲ್ಲಿ ತುರ್ತಾಗಿ ಪರಿಹಾರ ನೀಡಲು, ಸಾಂದರ್ಭಿಕ ತುರ್ತು ಕ್ರಮ ಕೈಗೊಳ್ಳಲು ಅಧಿಕಾರ ಮತ್ತು ವಿಶೇಷ ನಿಧಿಯನ್ನು ಶಿಫಾರಸ್ಸು ಮಾಡಲಾಗಿದೆ. ಮತ್ತು ಅಧ್ಯಕ್ಷರಿಗೆ ಜವಾಬ್ದಾರಿ ನಿರ್ವಹಿಸಲು ಅಗತ್ಯ ಸೌಕರ್ಯ ಸೌಲಭ್ಯ ಮತ್ತು ಬೆಂಬಲ ಕಲ್ಪಿಸಲಾಗಿದೆ, ಅಧ್ಯಕ್ಷರನ್ನು ಚುನಾಯಿತ ಪ್ರತಿನಿಧಿಗಳೇ ಆಯ್ಕೆ ಮಾಡುತ್ತಾರೆ. ಇದು ಸಂವಿಧಾನದ ಮತ್ತು ಪ್ರಜಾಪ್ರಭುತ್ವದ ಆಶಯಗಳಿಗೆ ಪೂರಕವಾಗಿರುತ್ತದೆ. ಮತ್ತು ನಮ್ಮ ಪಾರ್ಲಿಮೆಂಟರಿ ಪ್ರಜಾಪ್ರಭುತ್ವಕ್ಕೆ ಸಮನಾಗಿರುತ್ತದೆ. ಅಧ್ಯಕ್ಷರು ಎಲ್ಲರಲ್ಲಿ ಒಬ್ಬರು ಎನ್ನುವ ಪ್ರಜಾಪ್ರಭುತ್ವದ ತತ್ವವನ್ನು ಎತ್ತಿ ಹಿಡಿಯುತ್ತದೆ. ಅಧ್ಯಕ್ಷರು ಉಪಾಧ್ಯಕ್ಷರು ಪದೇ ಪದೇ ರಾಜಿನಾಮೆ ಬದಲಾವಣೆ ಸುಲಭ ಸಾಧ್ಯವಾಗದಂತೆ ಮಾಡಲು ನೀತಿ ನಿಯಮಗಳನ್ನು ರೂಪಿಸಲಾಗಿದೆ. ನೈಜ ಮತ್ತು ಅತೀ ಅಗತ್ಯದ ಕಾರಣಗಳಿಲ್ಲದೆ ರಾಜಿನಾಮೆ ಅಥವಾ ಬದಲಾವಣೆ ಮಾಡಲು ಸಾಧ್ಯವಾಗುವುದಿಲ್ಲ. ಅವಿಶ್ವಾಸ ನಿರ್ಣಯಗಳೂ ಕೂಡಾ ಸಕಾರಣ ಇಲ್ಲದೆ ಹಾಗೆಯೇ ಪದೇ ಪದೇ ಮಂಡಿಸಲಾಗದಂತೆ ಅವಧಿಗಳ ಬದಲಾವಣೆಯ ಮೂಲಕ ತಡೆಯಲಾಗಿದೆ. ಯಾವಾಗ ಜವಾಬ್ದಾರಿ ನಿರ್ವಹಣೆಯ ವಿಫಲತೆ, ಅಭಿವೃದ್ಧಿ ಕಾರ್ಯಗಳ ಅನುಷ್ಠಾನದಲ್ಲಿ ವಿಫಲತೆ ಭ್ರಷ್ಟಾಚಾರ, ಕ್ರಿಮಿನಲ್ ಪ್ರಕರಣ ಇಂತಹ ಕೆಲವು ಸಂದರ್ಭಗಳಲ್ಲಿ ಮಾತ್ರ ಅವಿಶ್ವಾಸ ನಿರ್ಣಯ, ಬದಲಾವಣೆಗೆ ಅವಕಾಶ ಕಲ್ಪಿಸಲಾಗಿದೆ.

**ಅಭ್ಯರ್ಥಿ ಚುನಾವಣಾ ವೆಚ್ಚ ಸರಕಾವೇ ಭರಿಸಲು ಶಿಫಾರಸ್ಸು:**

ಚುನಾವಣೆಯಲ್ಲಿ ತೀವ್ರ ಸುಧಾರಣೆ ತರಲು ರಾಜ್ಯ ಚುನಾವಣಾ ಆಯೋಗಕ್ಕೆ ಹೆಚ್ಚಿನ ಅಧಿಕಾರ ನೀಡಿದೆ. ಚುನಾವಣೆಯಲ್ಲಿ ಧುರ್ನಡತೆ ನಿಯಮ ಉಲ್ಲಂಘನೆ ತೀವ್ರವಾಗಿ ಪರಿಗಣಿಸಿ ದಂಡ ಶಿಕ್ಷೆ ಚುನಾವಣೆಗೆ ನಿಲ್ಲದಂತೆ ನಿಶೇಧ ಇಂತಹ ಕ್ರಮಗಳನ್ನು ಶಿಫಾರಸ್ಸು ಮಾಡಿದೆ. ಚುನಾವಣಾ ವೆಚ್ಚ ಕಡಿತಗೊಳಿಸಲು ಆಮಿಶ ಭ್ರಷ್ಟಾಚಾರ ತಡೆಯಲು ಸರಕಾರವೇ ಅಭ್ಯರ್ಥಿ ಚಿನಾವಣಾ ವೆಚ್ಚ ಭರಿಸುವ ಮತ್ತು ಚುನಾವಣಾ ಆಯೋಗವೇ ಸಾರ್ವಜನಿಕ ಸಭೆ ಆಯೋಜಿಸಿ ಅಭ್ಯರ್ಥಿಗಳು ಅಲ್ಲೆ ಬಂದು ಮತದಾರರಿಗೆ ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ತಿಳಿಸಲು ಅವಕಾಶ ಮಾಡಿ ಕೊಟ್ಟಿದೆ. ಚುನಾವಣಾ ಪ್ರಕ್ರಿಯೆಯನ್ನು ಶೀಘ್ರ ಮತ್ತು ತೀರಾ ಕಡಿಮೆ ದಿನಗಳಲ್ಲಿ ಮಾಡಿ ಮುಗಿಸಲು ಹಾಗೂ ಆಮಿಶ ಬ್ರಷ್ಠಾಚಾರ ತಡೆಯಲು ಕ್ರಮ ಶಿಫಾರಸ್ಸು ಮಾಡಲಾಗಿದೆ. ಇಡೀ ಗ್ರಾಮ ಪಂಚಾಯತಗಳಲ್ಲಿ ಕ್ಷೇತ್ರಗಳನ್ನು ಏಕ ವ್ಯಕ್ತಿ ಪ್ರತಿನಿಧಿಸುವ ಪ್ರತ್ಯೇಕ ಕ್ಷೇತ್ರಗಳಾಗಿ ಬದಲಾಯಿಸಲು ಶಿಫಾರಸ್ಸು ಮಾಡಲಾಗಿದೆ. ಈಗ ಇರುವ ಬಹುಪ್ರತಿನಿಧಿ ಕ್ಷೇತ್ರಗಳನ್ನು ಏಕ ವ್ಯಕ್ತಿ ಕ್ಷೇತ್ರವಾಗಿ ವಿಂಗಡಿಸಲು ನಿರ್ಧರಿಸಲಾಗಿದೆ. ಈ ಮೂಲಕ ಕ್ಷೇತ್ರಾಭಿವೃದ್ಧಿಗೆ ಸ್ಪಷ್ಟ ಜವಾಬ್ದಾರಿ ಆಯಾ ಪ್ರತಿನಿಧಿಗಳದ್ದಾಗಿರುತ್ತದೆ., ಈ ಮೂಲಕ ಸಾಮಾಜಿಕ ನ್ಯಾಯ ಪಾರದರ್ಶಕತೆ ಉತ್ತರದಾಯಿತ್ವ ಸ್ಪಷ್ಟವಾಗುತ್ತದೆ.

**ಕಡ್ಡಾಯ ಸಾಮರ್ಥ್ಯ ಅಭಿವೃದ್ಧಿ:**

ಪ್ರತಿ 5 ವರ್ಷಕ್ಕೊಮ್ಮೆ ಈಗಿರುವ ಗ್ರಾಮ ಪಂಚಾಯತಗಳ ಅವಧಿ ಮುಗಿಯುವ 3 ತಿಂಗಳು ಅಥವಾ 6 ತಿಂಗಳ ಮೊದಲು ಗ್ರಾಮ ಪಂಚಾಯತ್ ಚುನಾವಣೆ ನಡೆಸಬೇಕು. ಅವರು ಅಧಿಕಾರ ಸ್ವೀಕರಿಸುವ ಮೊದಲು ಆಯ್ಕೆಯಾದ ಅಧ್ಯಕ್ಷರು ಉಪಾಧ್ಯಕ್ಷರು ಸ್ಥಾಯಿ ಸಮಿತಿಯವರಿಗೆ ಪರಿಪೂರ್ಣ ಮಾಹಿತ ತರಭೇತಿ ನೀಡಿದ ನಂತರವೇ ಅಧಿಕಾರ ಸ್ವೀಕರಿಸುವ ಪ್ರಕ್ರಿಯೆ ಆಗಬೇಕು. ಈ ಮೂಲಕ ಆಧ್ಯಕ್ಷ ಉಪಾಧ್ಯಕ್ಷ, ಸ್ಥಾಯಿ ಸಮಿತಿಯವರಿಗೆ ತಮ್ಮ ಜವಾಬ್ದಾರಿ ಕೆಲಸದ ಕಾರ್ಯವ್ಯಾಪ್ತಿ ಬಗ್ಗೆ ಸ್ಪಷ್ಟತೆ ಇರುತ್ತದೆ.ಈ ತರಭೇತಿಗಳು ನಿಯತಕಾಲಿಕವಾಗಿ ನಡೆಯಬೇಕಾಗುತ್ತದೆ.

**ಮೌಲ್ಯ ಮಾಪನ:**

ಪ್ರತೀ ಯೋಜನೆಗೆ ಕಾರ್ಯಕ್ರಮಕ್ಕೆ ಸಾಧನೆಗೆ ಸ್ಥಳೀಯ ರಾಜ್ಯ ದೇಶಮಟ್ಟದ ಸಾಧನೆಯ ಅಳತೆಗೋಲುಗಳನ್ನು ನಿರ್ಧರಿಸಿ ಅದನ್ನು ಎಲ್ಲಾ ಜನರಿಗೆ ಪ್ರಚುರ ಪಡಿಸಿ ಪ್ರತೀ ಯೋಜನೆ ಕಾರ್ಯಕ್ರಮ ಸ್ಕೀಂಗಳನ್ನು ಆ ನೆಲೆಯಲ್ಲಿ ಅದರ ಅನುಷ್ಠಾನ, ಪರಿಣಾಮ, ಮೌಲ್ಯ ಮಾಪನ ನಿಯತಕಾಲಿಕವಾಗಿ ನಡೆಸುವ ಕ್ರಿಯೆ ಸ್ಥಾಪಿಸಬೇಕು. ಗ್ರಾಮ ಸಭೆಯು ಈ ಅಳತೆಗೋಲುಗಳನ್ನು ಆಧರಿಸಿ ತನ್ನದೇ ವಿಚಕ್ಷಣದಳ ರಚಿಸಿ ಮೌಲ್ಯಮಾಪನ ಮಾಡಲು ಅವಕಾಶ ನೀಡಲಾಗಿದೆ. ಈ ಮೂಲಕ ಪಾರದರ್ಶಕತೆ ಮತ್ತು ಭ್ರಷ್ಟಾಚಾರ ತಡೆಯಲು ಸಾಧ್ಯತೆಗಳು ಹೆಚ್ಚಾಗಿವೆ.

**ಬಿಕ್ಕಟ್ಟು ನಿವಾರಣೆ:**

ವಿವಿಧ ನೆಲೆಯ ಸಮಸ್ಯೆ ವಿವಾದ ಬಿಕ್ಕಟ್ಟು ನಿವಾರಣೆಗೆ ವ್ಯವಸ್ಥೆ.

1. ಜನ ಮತ್ತು ಜನರ ನಡುವೆ
2. ಜನರು ಹಾಗೂ ಸ್ಥಳೀಯ ಸರಕಾರಗಳ ನಡುವೆ
3. ಸ್ಥಳೀಯ ಸರಕಾರ ನಡುವೆ ಹಾಗೂ ಸ್ಥಳೀಯ ಸರಕಾರ ಮತ್ತು ರಾಜ್ಯ ಸರಕಾರದ ನಡುವೆ.

ಇಂತಹ ಬಿಕ್ಕಟ್ಟಿನ ಪರಿಹಾರಕ್ಕೆ ಜಿಲ್ಲಾ ಮಟ್ಟದ ಪಂಚಾಯತ್ ಟ್ರಿಬ್ಯೂನ್ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿದೆ.

ಪಂಚಾಯತ್ ಪ್ರತಿ ನಿಧಿಗಳು ಅಧಿಕಾರಿಗಳು ಹಣ ಮತ್ತು ಅಧಿಕಾರದ ದುರ್ಬಳಕೆ ಭ್ರಷ್ಟಾಚಾರ ಇಂತಹ ವಿಷಯಗಳ ಬಗ್ಗೆ ತನಿಖೆ ನಡೆಸಿ ನ್ಯಾಯ ನೀಡಲು ಅಂಬುಡ್ಸಮನ್ ನೇಮಕಾತಿ,

ರಾಜ್ಯ ದೇಶದ ಕಾನೂನಿನ ಚೌಕಟ್ಟಿನಲ್ಲಿ ಗ್ರಾಮಗಳಲ್ಲಿ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಕಾರ್ಯಕ್ರಮ ಹಾಗೂ ಕೆಲಸದ ಸ್ಥಳ ಮನೆ ಹಾಗೂ ಇತರ ಸಾರ್ವಜನಿಕ ಸ್ಥಳಗಳಲ್ಲಿ ನಡೆದ ದೌರ್ಜನ್ಯದ ಬಗ್ಗೆ ತನಿಖೆ ನಡೆಸಿ ಕಾರ್ಯಪ್ರವೃತ್ತ ರಾಗಲು ಪಂಚಾಯತ್ ಸಮಿತಿ ರಚಿಸತಕ್ಕದ್ದು.

**ವಿವಿಧ ರಚನೆಗಳ ಸ್ಥಾಪನೆ:**

1. ಕರ್ನಾಟಕ ಪಂಚಾಯತ್ ಎಡ್ಮಿನಿಸ್ಟ್ರೇಟಿವ್ ಸರ್ವಿಸ್: ಪಂಚಾಯತ್ ಸಂಸ್ಥೆಗಳಿಗೆ ಸೇವೆ ನಿರ್ವಹಿಸಲು ಅಗತ್ಯ ಸಿಬ್ಬಂದಿ ಆಯ್ಕೆ ಮತ್ತು ನೇಮಕಾತಿ ಸಂಸ್ಥೆ ಪ್ರಾರಂಭ. ಈ ಮೂಲಕ ಪಂಚಾಯತ್ ಸಂಸ್ಥೆಗಳಿಗೆ ಅಗತ್ಯ ಸಿಬ್ಬಂಧಿಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಇದರ ನೆಲೆಯಲ್ಲೆ ಪ್ರತ್ಯೇಕ ಡೈರೆಕ್ಟರೇಟ್/ಕಮಿಶನರೇಟ್ ಆಫ್ ಪಂಚಾಯತ್ ಅಡ್ಮಿನ್ ಈ ಮೂಲಕ ಪಂಚಾಯತ್ ರಾಜ್ ಗೆ ಸಂಬಂಧ ಪಟ್ಟಂತೆ ನುರಿತ ಹಾಗೂ ಮಾಹಿತಿ ಇರುವ ಸಿಬ್ಬಂಧಿ ನೇಮಕಾತಿ ಸಾಧ್ಯ ವಾಗುತ್ತದೆ.

2. ಕರ್ನಾಟಕ ಪಂಚಾಯತ್ ಆಡಳಿತ ಮತ್ತು ತಾಂತ್ರಿಕ ಸೇವಾ ಮಂಡಳಿ: ಈ ಮಂಡಳಿಯ ಮೂಲಕ ಪಂಚಾಯತ್ ಪ್ರತಿನಿಧಿಗಳು ಅಧ್ಯಕ್ಷ ಉಪಾಧ್ಯಕ್ಷರು ಸ್ಥಾಯಿ ಸಮಿತಿ ಇತರ ಸಿಬ್ಬಂಧಿ ಮತ್ತು ತಾಂತ್ರಿಕ ಸಿಬ್ಬಂಧಿ ಸಾಮಾರ್ಥ್ಯಾಭಿವೃದ್ಧಿಯನ್ನು ನಿರಂತರವಾಗಿ, ನಿಯತಕಾಲಿಕವಾಗಿ ನಡೆಸುವ ಮೂಲಕ ಇಡೀ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪರಿಣಾಮ ಕಾರಿಯಾಗಿ ಮಾಡಲು ಸಾಧ್ಯವಾಗುತ್ತದೆ.

3. ಮೂರು ಹಂತದ ಪಂಚಾಯತ್ ನ ಮುಖ್ಯಕಾರ್ಯದರ್ಶಿಗಳಿಗಾಗಿ ರಿಜಿಸ್ಟರ್ಡ್ ಯುನಿವರ್ ಸಿಟಿಯೊಡನೆ 2 ವರ್ಷದ ಪಂಚಾಯತ್ ರಾಜ್ ಕೋರ್ಸನ್ನು ವಿನ್ಯಾಸಗೊಳಿಸುವುದು.

4. ಯೋಜನೆ ಮತ್ತು ನೀತಿ ನಿಯಮಗಳಿಗೆ ಸಲಹೆ ಮಾಹಿತಿ ಕೊಡಲು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಬೋರ್ಡ್ ಸ್ಥಾಪನೆ.

## ಸಂಪೂರ್ಣ ಗ್ರಾಮಸ್ವರಾಜ್ ದತ್ತ ಕರ್ನಾಟಕ